7 

# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೊಡಗು ಜಿಲ್ಲೆ, ಮಡಿಕೇರಿ

ಉಪಸ್ಥಿತರು: ಮೀರ್ ಅನೀಸ್ ಅಹಮದ್ ಭಾ.ಆ.ಸೇ.,
ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ.

ನಂ:ರೆ.ಅ/ರಿವಿಜನ್/04/2012-13 ದಿನಾಂಕ:21-03-2016

**ವಾದಿಗಳು**

ಶ್ರೀ ಎನ್.ಎ. ಪೂವಯ್ಯ,
ಬಿನ್.ಲೇಟ್. ಎನ್.ಟಿ. ಅಪ್ಪಯ್ಯ,
ಕಾಲೇಜು ರಸ್ತೆ,
ಮಡಿಕೇರಿ.

**ಪ್ರತಿವಾದಿಗಳು**

1. ಉಪ ವಿಭಾಗಾಧಿಕಾರಿ,
   ಮಡಿಕೇರಿ ಉಪ ವಿಭಾಗ,
   ಮಡಿಕೇರಿ.
2. ತಹಶೀಲ್ದಾರ್,
   ಮಡಿಕೇರಿ ತಾಲ್ಲೂಕು,
   ಮಡಿಕೇರಿ.
3. ಕಂದಾಯ ಪರಿವೀಕ್ಷಕರು,
   ನಾಪೋಕ್ಲು ಹೋಬಳಿ,
   ಮಡಿಕೇರಿ ತಾಲ್ಲೂಕು.
4. ಗ್ರಾಮ ಲೆಕ್ಕಾಧಿಕಾರಿ,
   ಪಾಲೂರು - ನಾಪೋಕ್ಲು ಹೋಬಳಿ,
   ಮಡಿಕೇರಿ ತಾಲ್ಲೂಕು.
5. ಶ್ರೀಮತಿ ಪಿ.ಡಿ. ಅಮ್ಮವ್ವ,
   ಕೋಂ. ಪುದಿಯನೆರವಂಡ ದೇವಪ್ಪ,
   ಪಾಲೂರು ಗ್ರಾಮ,
   ಮಡಿಕೇರಿ ತಾಲ್ಲೂಕು.

---

ದಾವಾ ಜಮೀನು: ಮಡಿಕೇರಿ ತಾಲ್ಲೂಕು, ಪಾಲೂರು ಗ್ರಾಮದ ಸ.ನಂ. 58/1ರ 5.00 ಎಕರೆ ಮತ್ತು 60/1ರ 3.36 ಎಕರೆ.

ಪ್ರಸ್ತಾವನೆ:

ವಾದಿಗಳು ಈ ರಿವಿಜನ್ ಅರ್ಜಿಯನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 136 (3)ರಡಿ ಸಲ್ಲಿಸಿ 1ನೇ ಪ್ರತಿವಾದಿಗಳ ಆದೇಶ ಸಂ:ರೆ.ಅ/59/2008-09, ದಿನಾಂಕ:12-04-2011ನ್ನು ಪ್ರಶ್ನಿಸಿರುತ್ತಾರೆ.

ಸದರಿ ರಿವಿಜನ್ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿ ಉಭಯತ್ರರಿಗೂ ನೋಟೀಸ್ ನೀಡಿ ವಾದ ಮಂಡನೆಗೆ ಸಾಕಷ್ಟು ಅವಕಾಶ ಕೊಟ್ಟು ಪ್ರಕರಣವನ್ನು ವಿಚಾರಣೆಗೊಳಪಡಿಸಲಾಯಿತು.

ವಾದಿ ಪರ ವಕೀಲರು ಸಲ್ಲಿಸಿದ ಲಿಖಿತವಾದ ಹಾಗೂ ಮೌಖಿಕವಾದದ ಪ್ರಮುಖ ಅಂಶಗಳು ಕೆಳಕಂಡಂತಿದೆ.

1) ದಾವಾ ಜಮೀನುಗಳು ಮೂಲತಃ ಪಾಲೂರು ಗ್ರಾಮದ ಶ್ರೀ ನೆರವಂಡ ತಿಮ್ಮಯ್ಯನವರಿಗೆ ಸೇರಿದ್ದು, ಅವರ ಮರಣಾ ನಂತರ ಅವರ ಮಕ್ಕಳಾದ ಎನ್.ಟಿ. ಅಪ್ಪಯ್ಯ ಮತ್ತು ಎನ್.ಟಿ. ಪೊನ್ನಪ್ಪ ನವರು ಜಂಟಿಯಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ಈ ರೀತಿ ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ಎನ್.ಟಿ. ಪೊನ್ನಪ್ಪ ನವರು ದಿನಾಂಕ:20-02-1982ರಂದು ನೋಂದಾಯಿತ ಕ್ರಯ ಪತ್ರದಂತೆ 5ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ.
2) ಸದರಿ ಮಾರಾಟ ಕ್ರಮವು ಗಮನಕ್ಕೆ ಬಂದ ನಂತರ ವಾದಿಗಳ ತಂದೆ ಎನ್.ಟಿ. ಅಪ್ಪಯ್ಯ ನವರು ಕ್ರಯ ಪತ್ರವನ್ನು ಪ್ರಶ್ನಿಸಿ ಮಡಿಕೇರಿಯ ಪ್ರಿನ್ಸಿಪಲ್ ಮುನ್ಸಿಫ್ ನ್ಯಾಯಾಲಯದಲ್ಲಿ ಓ.ಎಸ್. ನಂ:68/1982ರಂತೆ ಸದರಿ ಪೊನ್ನಪ್ಪ ಹಾಗೂ 5ನೇ ಪ್ರತಿವಾದಿಗಳ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಕೋರಿ ದಾವಾ ಹೂಡಿದ್ದು, ನ್ಯಾಯಾಲಯದಲ್ಲಿ ದಿನಾಂಕ:28-02-1985ರಲ್ಲಿ ವಾದಿಗಳ ಪರವಾಗಿ ಡಿಕ್ರಿಯಾಗಿರುತ್ತದೆ. ಸದರಿ ಡಿಕ್ರಿ ಆದೇಶವನ್ನು ಅಲ್ಲಿನ ಪ್ರತಿವಾದಿಗಳು ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲವಾದ್ದರಿಂದ ಡಿಕ್ರಿ ಆದೇಶವು ಅಂತಿಮವಾಗಿರುತ್ತದೆ.
3) 5ನೇ ಪ್ರತಿವಾದಿಗಳಾದ ಶ್ರೀಮತಿ ಪಿ.ಡಿ. ಅಮ್ಮವ್ವ ನವರು ನ್ಯಾಯಾಲಯದ ಡಿಕ್ರಿ ಆದೇಶವನ್ನು ಉಲ್ಲಂಘಿಸಿ ಸ.ನಂ. 58ರಲ್ಲಿ ಮರಗಳನ್ನು ಕಡಿಯುತ್ತಿರುವುದಾಗಿ ಎನ್.ಟಿ. ಅಪ್ಪಯ್ಯನವರು ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿದ್ದ Execution Petition No:63/1985ರ ಪ್ರಕರಣದಲ್ಲಿ 5ನೇ ಪ್ರತಿವಾದಿಗಳು ತಾನು ಸದರಿ ಜಮೀನಿನ ಮೇಲೆ ತನ್ನ ಸ್ವಂತ ಹಕ್ಕನ್ನು ಹೊಂದಿರದಿದ್ದು, ತಾನು ಅಲ್ಲಿ ಯಾವುದೇ ಕೃಷಿ ಮಾಡುತ್ತಿಲ್ಲ ಮತ್ತು ಮರಗಳನ್ನು ಕಡಿದಿರುವುದಿಲ್ಲವೆಂದೂ, ತನ್ನ ಗಂಡನು ಶ್ರೀ ಎನ್.ಟಿ. ಪೊನ್ನಪ್ಪ ನವರಿಂದ ಹೊಂದಿದ ಸಾಮಾನ್ಯ ಅಧಿಕಾರ ಪತ್ರದ ಮೇರೆ ಸ.ನಂ. 58ರಲ್ಲಿ ಬೇಸಾಯ ಮಾಡುತ್ತಿರುವುದಾಗಿ ಹೇಳಿಕೆ ನೀಡಿ ದಾವಾ ಜಮೀನಿನ ಮೇಲೆ ಹಕ್ಕು ಹೊಂದಿರುವುದಿಲ್ಲವೆಂದು ಒಪ್ಪಿಕೊಂಡಿರುತ್ತಾರೆ.
4) ಡಿಕ್ರಿ ಆದೇಶವಾಗಿ ಸುಮಾರು 23 ವರ್ಷಗಳು ಸುಮ್ಮನಿದ್ದು, ವಾದಿಗಳ 7 ವರ್ಷ ಪ್ರಾಯದ ಮಗನು ಸಾವಿಗೀಡಾಗಿ ವಾದಿಗಳ ಕುಟುಂಬವು ದುಃಖದ ಪರಿಸ್ಥಿತಿಯಲ್ಲಿದ್ದ ಅವಕಾಶವನ್ನು ಬಳಸಿಕೊಂಡು 5ನೇ ಪ್ರತಿವಾದಿಗಳು ದಾವಾ ಜಮೀನಿನ ಖಾತೆ ವರ್ಗಾವಣೆಗಾಗಿ 2ನೇ ಪ್ರತಿವಾದಿಗಳಾದ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿರುತ್ತಾರೆ. ವಾದಿಗಳಿಗೆ ಯಾವುದೇ ತಿಳುವಳಿಕೆ ನೀಡದೇ, ವಿಚಾರಣೆ ಮಾಡದೇ 2ನೇ ಪ್ರತಿವಾದಿಗಳು ದಾವಾ ಜಮೀನಿನ ಖಾತೆಯನ್ನು 5ನೇ ಪ್ರತಿವಾದಿಗಳ ಹೆಸರಿಗೆ ವರ್ಗಾವಣೆ ಮಾಡಿರುತ್ತಾರೆ.
5) ಖಾತೆ ವರ್ಗಾವಣೆ ವಿಚಾರ ಗಮನಕ್ಕೆ ಬಂದ ನಂತರ ವಾದಿಗಳು ಖಾತೆ ವರ್ಗಾವಣೆಯ ಮ್ಯುಟೇಶನ್ ಆದೇಶವನ್ನು ಪ್ರಶ್ನಿಸಿ 1ನೇ ಪ್ರತಿವಾದಿಗಳಿಗೆ ಮೇಲ್ಮನವಿ ಸಲ್ಲಿಸಿದ್ದು, 1ನೇ ಪ್ರತಿವಾದಿಗಳು ಪ್ರಶ್ನಿತ ಆದೇಶದಂತೆ ವಾದಿಗಳ ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ.
6) ಎನ್.ಟಿ. ಪೊನ್ನಪ್ಪ ನವರು 5ನೇ ಪ್ರತಿವಾದಿಗಳಿಗೆ ಮಾಡಿಕೊಟ್ಟ ಕ್ರಯ ಪತ್ರವು ಎನ್.ಟಿ. ಅಪ್ಪಯ್ಯ ನವರಿಗೆ Binding ಅಲ್ಲವೆಂದು ನ್ಯಾಯಾಲಯದ ಡಿಕ್ರಿ ಆದೇಶದಲ್ಲಿ ತಿಳಿಸಿರುವುದನ್ನು ಹಾಗೂ ದಾವಾ ಜಮೀನಿನ ಮೇಲೆ ನ್ಯಾಯಾಲಯವು Permanent Injuction ಮಂಜೂರು ಮಾಡಿರುವುದನ್ನು ಗಣನೆಗೆ ತೆಗೆದುಕೊಳ್ಳದೇ 1ನೇ ಪ್ರತಿವಾದಿಗಳು ಪ್ರಶ್ನಿತ ಆದೇಶ ಹೊರಡಿಸಿರುತ್ತಾರೆ.

ಆದುದರಿಂದ 1ನೇ ಪ್ರತಿವಾದಿಗಳ ಆದೇಶವನ್ನು ಬದಿಗೊತ್ತಿ ಆದೇಶಿಸಬೇಕೆಂದು ಕೋರಲಾಗಿದೆ.

5ನೇ ಪ್ರತಿವಾದಿಗಳ ಪರವಕೀಲರು ಸಲ್ಲಿಸಿದ ಲಿಖಿತವಾದ ಮತ್ತು ಮೌಖಿಕವಾದದ ಪ್ರಮುಖ ಅಂಶಗಳು ಈ ಕೆಳಕಂಡಂತಿದೆ.

1) 5ನೇ ಪ್ರತಿವಾದಿಗಳು ದಾವಾ ಜಮೀನನ್ನು ವಾದಿಯ ಚಿಕ್ಕಪ್ಪ ಶ್ರೀ ಎನ್.ಟಿ. ಪೊನ್ನಪ್ಪ ನವರಿಂದ ದಿನಾಂಕ:20-02-1982ರಲ್ಲಿ ನೋಂದಾಯಿತ ಕ್ರಯ ಪತ್ರದಂತೆ ಖರೀದಿಸಿ ಸ್ವಾಧೀನ ಅನುಭವ ಹೊಂದಿರುತ್ತಾರೆ.
2) ಕ್ರಯ ಪತ್ರದ ಮೇರೆ 5ನೇ ಪ್ರತಿವಾದಿಗಳು ಖಾತೆ ವರ್ಗಾವಣೆಗೆ ಅರ್ಜಿ ಸಲ್ಲಿಸಿದಂತೆ 3ನೇ ಪ್ರತಿವಾದಿಗಳು ಎಂ.ಆರ್.ನಂ:28/2007-08, ದಿನಾಂಕ:18-05-2007ರಂತೆ 5ನೇ ಪ್ರತಿವಾದಿಗಳ ಹೆಸರಿಗೆ ಖಾತೆ ವರ್ಗಾಯಿಸಿರುತ್ತಾರೆ.
3) ಸದರಿ ಎಂ.ಸಿ. ನಡಾವಳಿಯನ್ನು ಪ್ರಶ್ನಿಸಿ ವಾದಿಯವರು 1ನೇ ಪ್ರತಿವಾದಿಗಳ ಮುಂದೆ ಸಲ್ಲಿಸಿದ ಆರ್.ಎ. ನಂ:59/2008-09ರ ಮೇಲ್ಮನವಿಯನ್ನು ವಿಚಾರಣೆಗೊಳಪಡಿಸಿ 1ನೇ ಪ್ರತಿವಾದಿಗಳು ದಿನಾಂಕ:12-04-2011ರಲ್ಲಿ ವಜಾ ಮಾಡಿರುತ್ತಾರೆ.
4) ಖಾತೆ ವರ್ಗಾವಣೆ ಸಮಯದಲ್ಲಿ ಯಾರೂ ತಕರಾರು ಸಲ್ಲಿಸಿರುವುದಿಲ್ಲ.
5) ವಾದಿಯವರ ತಂದೆ ಮಡಿಕೇರಿ ಮುನ್ಸಿಫ್ ನ್ಯಾಯಾಲಯದಲ್ಲಿ ತನ್ನ ಸಹೋದರ ಎನ್.ಟಿ. ಪೊನ್ನಪ್ಪ ಮತ್ತು 5ನೇ ಪ್ರತಿವಾದಿಗಳ ವಿರುದ್ಧ ಓ.ಎಸ್. ನಂ:68/1982ರಂತೆ ದಾವೆ ಹೂಡಿದ್ದು ನಿಜ. ಸದರಿ ದಾವೆಯು ಸ.ನಂ. 58ಕ್ಕೆ ಸಂಬಂಧಿಸಿದ್ದು, ಸ.ನಂ. 60/1ಕ್ಕೆ ಸಬಂಧಿಸಿರುವುದಿಲ್ಲ ಹಾಗೂ ಸದರಿ ದಾವೆಯಲ್ಲಿ ಕ್ರಯ ಪತ್ರವನ್ನು ಅಸಿಂಧುಗೊಳಿಸಿರುವುದಿಲ್ಲ.
6) ಮುನ್ಸಿಫ್ ನ್ಯಾಯಾಲಯವು ದಾವಾ ಜಮೀನಿಗೆ ವಾದಿಯ ತಂದೆ ಹಾಗೂ ಅವರ ಸಹೋದರ ಎನ್.ಟಿ. ಪೊಮ್ಮಪ್ಪ ನವರು ಜಂಟಿ ಸ್ವಾಧೀನಾನುಭವ ಹೊಂದಲು ಆದೇಶಿಸಿರುತ್ತಾರೆ. ಹೀಗಾಗಿ ಪರೋಕ್ಷವಾಗಿ 5ನೇ ಪ್ರತಿವಾದಿಗಳ ಹಿತಾಸಕ್ತಿಯನ್ನು ನ್ಯಾಯಾಲಯವು ಎತ್ತಿ ಹಿಡಿದಿರುತ್ತದೆ.
7) ಡಿಕ್ರಿಯು 28 ವರ್ಷಗಳ ಹಿಂದೆ ಆಗಿದ್ದು, ಈವರೆಗೂ (Execute) ಜಾರಿಗೊಂಡಿರುವುದಿಲ್ಲವಾದ್ದರಿಂದ ಡಿಕ್ರಿಯು ಕಾಲಮಿತಿಯಲ್ಲಿ ವಿಳಂಬಿತಗೊಂಡಿರುತ್ತದೆ.
8) ವಾದಿಯವರ ತಂದೆ ಎನ್.ಟಿ. ಅಪ್ಪಯ್ಯ ನವರು ಸಲ್ಲಿಸಿದ್ದ Execution Petition No: 63/1985, ದಿನಾಂಕ:10-12-1987ರಲ್ಲೂ, Execution Petition No:193/1988, ದಿನಾಂಕ: 06-06-1998ರಲ್ಲೂ ವಜಾಗೊಂಡಿರುತ್ತದೆ.
9) ಎನ್.ಟಿ. ಪೊನ್ನಪ್ಪ ನವರು ತಮ್ಮ ಪಾಲಿನ ಹಿಸ್ಸೆಯ ಹಕ್ಕಿನ ಜಾಗವನ್ನು ಮಾತ್ರ 5ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುವುದಾಗಿದ್ದು, ವಾದಿಯವರು ಪೂರ್ತಿ ಹಕ್ಕನ್ನು ಕೇಳುವುದು ಸರಿಯಲ್ಲ. 3ನೇ ಪ್ರತಿವಾದಿಗಳು ಖಾತೆ ವರ್ಗಾವಣೆ ಮಾಡಿರುವುದು ಕ್ರಮಬದ್ಧವಾಗಿದ್ದು, ವಾದಿಯವರು ಯಾವುದೇ ಪರಿಹಾರ ಕೋರಲು ಅರ್ಹರಾಗಿರುವುದಿಲ್ಲ.

ಆದುದರಿಂದ ವಾದಿಯವರ ರಿವಿಜನ್ ಅರ್ಜಿಯನ್ನು ವಜಾಗೊಳಿಸಲು ಕೋರಲಾಗಿದೆ.

ವಾದ, ಲಿಖಿತವಾದ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು. ಈ ಪ್ರಕರಣದಲ್ಲಿ ದಾವಾ ಜಮೀನು ಮೂಲತಃ ದಿವಂಗತ ನೆರವಂಡ ತಿಮ್ಮಯ್ಯ ನವರಿಗೆ ಸೇರಿದ್ದು, ವಾದಿಯ ತಂದೆ ಎನ್.ಟಿ. ಅಪ್ಪಯ್ಯ ಮತ್ತು ಎನ್.ಟಿ. ಪೊನ್ನಪ್ಪ ನವರು ತಿಮ್ಮಯ್ಯ ನವರ ಮಕ್ಕಳಾಗಿರುತ್ತಾರೆ. ಎನ್.ಟಿ. ಪೊನ್ನಪ್ಪ ನವರು ಪ್ರಸ್ತಾವಿತ ಪಾಲೂರು ಗ್ರಾಮದ ಸ.ನಂ. 58ರಲ್ಲಿ 11.56 ಎಕರೆ ಪೈಕಿ 5.00 ಎಕರೆ ಹಾಗೂ ಸ.ನಂ. 60/1ರಲ್ಲಿ 5.83 ಎಕರೆ ಪೈಕಿ 3.36 ಎಕರೆ ಜಮೀನನ್ನು ದಿನಾಂಕ:20-02-1982ರ ನೋಂದಾಯಿತ ಕ್ರಯಪತ್ರದಂತೆ 5ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ.

ದಾವಾ ಜಮೀನಿನ ಪೈಕಿ ಸ.ನಂ. 58ರ 11.56 ಎಕರೆ ಜಮೀನಿನ ಬಗ್ಗೆ ವಾದಿಯ ತಂದೆಯವರು ಮಡಿಕೇರಿಯ ಪ್ರಿನ್ಸಿಪಲ್ ಮುನ್ಸಿಫ್ ನ್ಯಾಯಾಲಯದಲ್ಲಿ ಸಲ್ಲಿಸಿದ ಮೂಲ ದಾವೆ ಸಂ:ಓ.ಎಸ್. 68/82ರಲ್ಲಿ ದಿನಾಂಕ:28-02-1985ರ ಆದೇಶದಲ್ಲಿ ದಾವಾ ಜಮೀನು ಎನ್.ಟಿ. ಅಪ್ಪಯ್ಯ (ವಾದಿಯವರ ತಂದೆ) ಹಾಗೂ ಎನ್.ಟಿ. ಪೊನ್ನಪ್ಪ (ವಿಕ್ರಯದಾರರು) ನವರ ಜಂಟಿ ಅನುಭವದಲ್ಲಿ ಇರತಕ್ಕದೆಂದೂ,

ಎನ್.ಟಿ. ಪೊನ್ನಪ್ಪ ನವರು 5ನೇ ಪ್ರತಿವಾದಿಗಳಿಗೆ ಮಾಡಿಕೊಂಡ ಕ್ರಯಪತ್ರ ವಾದಿಯವರ ತಂದೆ ಎನ್.ಟಿ. ಅಪ್ಪಯ್ಯನವರಿಗೆ binding ಅಲ್ಲವೆಂದು ತಿಳಿಸಲಾಗಿರುತ್ತದೆ. ಅಲ್ಲದೇ, 5ನೇ ಪ್ರತಿವಾದಿಗಳ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ (Permanent Injuction) ಹೊರಡಿಸಲಾಗಿರುತ್ತದೆ.

ಡಿಕ್ರಿ ಆದೇಶವನ್ನು ಜಾರಿಗೊಳಿಸಲು ಡಿಕ್ರಿದಾರರಾದ ಎನ್.ಟಿ. ಅಪ್ಪಯ್ಯ ನವರು ಮಡಿಕೇರಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ Exeention petition ಗಳು ತಾಂತ್ರಿಕ ಕಾರಣಗಳಿಂದ ವಜಾಗೊಂಡಿರುತ್ತವೆ.

ಕ್ರಯಪತ್ರವಾಗಿ ಸುಮಾರು 26 ವರ್ಷಗಳ ನಂತರ ಹಾಗೂ ಡಿಕ್ರಿ ಆದೇಶವಾಗಿ ಸುಮಾರು 23 ವರ್ಷಗಳ ನಂತರ 5ನೇ ಪ್ರತಿವಾದಿಗಳು ದಾವಾ ಜಮೀನಿನ ಖಾತೆ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದು, 3ನೇ ಪ್ರತಿವಾದಿಗಳು ಎಂ.ಆರ್. ನಂ:28/2007-08, ದಿನಾಂಕ:18-08-2008ರಂತೆ 5ನೇ ಪ್ರತಿವಾದಿಗಳ ಹೆಸರಿಗೆ ಖಾತೆ ವರ್ಗಾಯಿಸಿರುತ್ತಾರೆ.

ದಾಖಲೆಗಳ ಪ್ರಕಾರ ದಾವಾ ಜಮೀನು ವಾದಿಯವರ ಕುಟುಂಬದ ಜಂಟಿ ಆಸ್ತಿಯಾಗಿದ್ದು, ಕುಟುಂಬದಲ್ಲಿ ಆಸ್ತಿ ಪಾಲು ಪಾರಿಕತ್ತು ಆಗದೇ ಜಂಟಿ ಖಾತೆಯಲ್ಲಿತ್ತು. ಖಾತೆ ವರ್ಗಾವಣೆ ಸಂದರ್ಭದಲ್ಲಿ ನ್ಯಾಯಾಲಯದ ಡಿಕ್ರಿ ಆದೇಶವನ್ನು ಗಣನೆಗೆ ತೆಗೆದುಕೊಳ್ಳದೇ 5ನೇ ಪ್ರತಿವಾದಿಗಳ ಹೆಸರಿಗೆ ಖಾತೆ ವರ್ಗಾಯಿಸಿರುವುದು ಕಂಡು ಬರುತ್ತದೆ. ಜಂಟಿ ಖಾತೆಯಲ್ಲಿರತಕ್ಕದೆಂದೂ, ವಾದಿಯವರ ತಂದೆ ಅಪ್ಪಯ್ಯ ನವರಿಗೆ ಪ್ರಶ್ನಿತ ಕ್ರಯಪತ್ರ binding ಅಲ್ಲವೆಂದೂ ಹಾಗೂ ಶಾಶ್ವತ ಪ್ರತಿಬಂಧಕಾಜ್ಞೆ ಜಾರಿಯಲ್ಲಿರುವ ಸಂದರ್ಭದಲ್ಲಿ ನ್ಯಾಯಾಲಯದ ಆದೇಶವನ್ನು ಪರಿಶೀಲಿಸದೇ ಖಾತೆ ವರ್ಗಾವಣೆ ಮಾಡಿರುವುದು ಸೂಕ್ತವಾಗಿರುವುದಿಲ್ಲ. ಡಿಕ್ರಿ ಆದೇಶವನ್ನು 5ನೇ ಪ್ರತಿವಾದಿಗಳಾಗಲೀ ಅಥವಾ ವಿಕ್ರಯದಾರರಾದ ಎನ್.ಟಿ. ಪೊನ್ನಪ್ಪ ನವರಾಗಲಿ ಸೂಕ್ತ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲವಾದ ಕಾರಣ ಡಿಕ್ರಿ ಆದೇಶವು ಅಂತಿಮವಾಗಿರುತ್ತದೆ. ಸಿವಿಲ್ ಹಕ್ಕು ಬಾಧ್ಯತೆಗಳ ಕುರಿತು ಸಂಬಂಧಪಟ್ಟ ಹಿತಾಸಕ್ತರು ಸೂಕ್ತ ಪ್ರಾಧಿಕಾರದಿಂದ ಪರಿಹಾರ ಕಂಡುಕೊಂಡು ಬಂದ ನಂತರ ಹಕ್ಕುದಾರಿಕೆಗಳನ್ನು ಪರಿಶೀಲಿಸಿ ಖಾತೆ ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ಈ ಪ್ರಕರಣದಲ್ಲಿ ನ್ಯಾಯಾಲಯದ ಡಿಕ್ರಿ ಆದೇಶದ ಪ್ರಕಾರ ದಾವಾ ಜಮೀನು ಹಿಂದೆ ಇದ್ದಂತೆ ಜಂಟಿ ಖಾತೆಯಲ್ಲಿ ಮುಂದುವರಿಯಬೇಕಾಗಿದ್ದು, ಎಂ.ಸಿ. ನಡಾವಳಿಯು ಸಿಂಧು ಎನಿಸುವುದಿಲ್ಲ. ಕೆಳ ನ್ಯಾಯಾಲಯದಲ್ಲಿ ಈ ಅಂಶಗಳ ಬಗ್ಗೆ ಪರಿಶೀಲಿಸಿದಂತಿಲ್ಲ. ಆದುದರಿಂದ ಪ್ರಕರಣದಲ್ಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು 1ನೇ ಪ್ರತಿವಾದಿಗಳ ಪ್ರಶ್ನಿತ ಆದೇಶವನ್ನು ಹಾಗೂ ಎಂ.ಆರ್. ನಂ:28/2007-08, ದಿನಾಂಕ:18-05-2008ರ ಮ್ಯುಟೇಶನ್ ನಡಾವಳಿಯನ್ನು ಬದಿಗೊತ್ತಿ ಆದೇಶಿಸಿದೆ. ಖಾತೆ ವರ್ಗಾವಣೆಗೆ ನಿಕಟ ಪೂರ್ವದಲ್ಲಿ ಇದ್ದಂತೆ ಪಹಣಿ ದಾಖಲಿಸಲು 2ನೇ ಪ್ರತಿವಾದಿಗಳಿಗೆ ನಿರ್ದೇಶಿಸಿದೆ.

ಈ ಆದೇಶನ್ನು ದಿನಾಂಕ:21-03-2016ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

21/3

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.